## ಇಲ್ಲಿದೆ ಸ್ವೀಡನ್ ಮಾದರಿ

ನಿತ್ಯ ಉತ್ಪಾದನೆಯಾಗುವ ತ್ಯಾಜ್ಯದ ರಾಶಿಯನ್ನು ಹೇಗೆ ವಿಲೇವಾರಿ ಮಾಡುವುದು ಎಂದು ನಮ್ಮ ಬೆಂಗಳೂರು ಮಹಾನಗರ ತಲೆಯ ಮೇಲೆ ಕೈಹೊತ್ತು ಕುಳಿತಿದ್ದರೆ, ಅತ್ತ ದೂರದ ಸ್ವೀಡನ್ ಕಸವೇ ಇಲ್ಲವೆಂದು ಒದ್ದಾಡುತ್ತಿದ್ದು, ಪಕ್ಕದ ನಾರ್ವೆ ದೇಶದಿಂದ ಆಮದು ಮಾಡಿಕೊಳ್ಳುತ್ತಿದೆ.

ತುಸು ಹೆಚ್ಚು–ಕಡಿಮೆ ಬೆಂಗಳೂರು ಮಹಾನಗರದಷ್ಟೇ ಜನಸಂಖ್ಯೆಯನ್ನು (95 ಲಕ್ಷ) ಹೊಂದಿರುವ ಸ್ವೀಡನ್, ಹುಡುಕಿದರೆ ಚೂರು ಕಸವೂ ಸಿಗದ ರೀತಿಯಲ್ಲಿ ಸ್ವಚ್ಛವಾಗಿದೆ.

ನಮ್ಮ ಬೆಂಗಳೂರಿನ ಪಾಲಿಗೆ ಕಸ ಅಜೀರ್ಣವಾಗಿದ್ದರೆ ಈ ದೇಶಕ್ಕೆ ತ್ಯಾಜ್ಯದ್ದೇ ಹಸಿವು. ಆದ್ದರಿಂದಲೇ ನಾರ್ವೆಯಂತಹ ಪಕ್ಕದ ದೇಶಗಳಿಂದ ಕಸವನ್ನು ಆಮದು ಮಾಡಿಕೊಳ್ಳುತ್ತಿದೆ.

ಸ್ವೀಡನ್ನಿನಲ್ಲಿ ತ್ಯಾಜ್ಯವನ್ನು ಹೇಗೆಲ್ಲ ಪುನರ್‌ಬಳಕೆ ಮಾಡಲಾಗುತ್ತದೆ ಎಂದರೆ ದೇಶದಲ್ಲಿ ಉತ್ಪಾದನೆಯಾದ ತ್ಯಾಜ್ಯದ ಕೇವಲ ಶೇಕಡಾ 4ರಷ್ಟು ಪ್ರಮಾಣ ಮಾತ್ರ ಕಸದ ಗುಂಡಿಗೆ ಹೋಗುತ್ತದೆ. ತ್ಯಾಜ್ಯದಿಂದ ವಿದ್ಯುತ್ ಮತ್ತು ಶಾಖವನ್ನು ಈ ದೇಶದಲ್ಲಿ ಉತ್ಪಾದನೆ ಮಾಡಲಾಗುತ್ತಿದ್ದು, ಸಾವಿರಾರು ಸಂಖ್ಯೆಯಲ್ಲಿ ಮನೆಗಳು ಕಸದ ವಿದ್ಯುತ್ತಿನಿಂದಲೇ ಬೆಳಗುತ್ತಿವೆ.

ಸ್ಟ್ಯಾಂಡರ್ಡ್ ಘನ ಮೀಟರ್) ನೈಸರ್ಗಿಕ ಅನಿಲ ತಲುಪಿಸುವ ಸಾಮರ್ಥ್ಯ ಹೊಂದಿದೆ.

11 ರಾಷ್ಟ್ರೀಯ ಹೆದ್ದಾರಿ, 382 ಇತರ ರಸ್ತೆಗಳ ಕ್ರಾಸಿಂಗ್, 83 ಕೇಸ್ಡ್ ಕ್ರಾಸಿಂಗ್, 20 ರೈಲ್ವೆ ಕ್ರಾಸಿಂಗ್, 276 ನೀರಿನ ಮೂಲಗಳು, ಘಟಪ್ರಭಾ ನದಿಯ ಕ್ರಾಸಿಂಗ್ ಅನ್ನು ಈ ಕೊಳವೆ ಮಾರ್ಗ ಸೀಳಿಕೊಂಡು ಬಂದಿದೆ. ಅಲ್ಲದೆ ಈ ಮಾರ್ಗವು 25 ಕಿ.ಮೀ. ಮೀಸಲು ಅರಣ್ಯ ಪ್ರದೇಶದಲ್ಲಿ ಹಾದುಕೊಂಡು ಬಂದಿದೆ.

‘ನಗರ ಅನಿಲ ವಿತರಣೆ ಯೋಜನೆ’ ಜಾರಿಗೆ ಅನುಕೂಲವಾಗುವಂತೆ ಬೆಂಗಳೂರು ನಗರದ ಹೊರವರ್ತುಲ ರಸ್ತೆಯಲ್ಲಿ 73 ಕಿಲೋ ಮೀಟರ್ ನೈಸರ್ಗಿಕ ಅನಿಲ ಕೊಳವೆ ಮಾರ್ಗ ಅಳವಡಿಸಲಾಗಿದೆ. ಆ ಕೊಳವೆಯಿಂದ ನಗರದ ನಾನಾ ಪ್ರದೇಶಗಳಿಗೆ ಕೊಳವೆ ಮಾರ್ಗ ಅಳವಡಿಸಿ ಅದರ ಮೂಲಕ ಅನಿಲ ಪೂರೈಕೆ ಮಾಡಲಾಗುತ್ತಿದೆ.

ಗೇಲ್‌ಗೆ ಹೊಣೆ: ಬೆಂಗಳೂರು ಹಾಗೂ ಗ್ರಾಮಾಂತರ ಜಿಲ್ಲೆಗಳಲ್ಲಿ ಮುಂದಿನ 25 ವರ್ಷಗಳಲ್ಲಿ ಒಟ್ಟು 263 ಕಿ.ಮೀ. ಉದ್ದದ ಅನಿಲ ಕೊಳವೆ ಮಾರ್ಗವನ್ನು ಅಳವಡಿಸುವ ನಗರ ಅನಿಲ ವಿತರಣಾ (ಸಿಜಿಡಿ) ಜಾಲ ನಿರ್ಮಾಣದ ಗುತ್ತಿಗೆಯನ್ನು ಗೇಲ್‌ಗೆ ನೀಡಲಾಗಿದೆ. ಜೊತೆಗೆ ಐದು ವರ್ಷಗಳ ಅವಧಿಗೆ ಎಲ್ಲ ಮನೆಗಳಿಗೂ ಕೊಳವೆ ಮೂಲಕ ಅಡುಗೆ ಅನಿಲ (ಪಿಎನ್‌ಜಿ) ಪೂರೈಸುವ ಹೊಣೆಯನ್ನೂ ವಹಿಸಲಾಗಿದೆ. ಈ ಸಂಬಂಧ ಪಿಎನ್‌ಜಿಆರ್‌ಬಿಯು ಕಂಪೆನಿಗೆ ಆದೇಶ ಪತ್ರ ನೀಡಿದೆ.

ಪಿಎನ್‌ಜಿಆರ್‌ಬಿ ರೂಪಿಸಿರುವ ಕನಿಷ್ಠ ಯೋಜನಾ ನಕ್ಷೆಯ ಪ್ರಕಾರ, ಕಂಪೆನಿಯು ಐದು ವರ್ಷಗಳ ಅವಧಿಯಲ್ಲಿ ಒಟ್ಟು ಮನೆಗಳಲ್ಲಿ ಶೇಕಡಾ 5ರಷ್ಟು ಮನೆಗಳಿಗೆ ಕೊಳವೆ ಮೂಲಕ ಅಡುಗೆ ಅನಿಲ ಸಂಪರ್ಕ ನೀಡಬೇಕಾಗಿದೆ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ 25 ಲಕ್ಷ ಮನೆಗಳಿವೆ ಎಂದು ಅಂದಾಜಿಸಲಾಗಿದೆ. ಅನಿಲ ಪೂರೈಕೆಗಾಗಿ ಕಂಪೆನಿಯು ಪಾಲಿಥಿಲೀನ್ (ಎಂಡಿಪಿಇ) ಅಥವಾ ಉಕ್ಕಿನ ಕೊಳವೆಗಳನ್ನು ಅಳವಡಿಸುತ್ತಿದೆ.

**1.32 ಲಕ್ಷ ಮನೆಗಳಿಗೆ ಪಿಎನ್‌ಜಿ:** ಗೇಲ್ ಸಂಸ್ಥೆ ನಗರ ಅನಿಲ ಸರಬರಾಜು ಯೋಜನೆ ಅಡಿ ಆರಂಭಿಕ ಹಂತದಲ್ಲಿ ನಗರದಲ್ಲಿ 1.32 ಲಕ್ಷ ಮನೆಗಳಿಗೆ ನೇರ ಅನಿಲ ಪೂರೈಸುವ ಗುರಿಯನ್ನು ಹೊಂದಿದೆ. 2 ಸಾವಿರ ಮನೆಗಳಿಗೆ ನೇರವಾಗಿ ಕೊಳವೆ ನೈಸರ್ಗಿಕ ಅನಿಲ (ಪಿಎನ್‌ಜಿ) ಪೂರೈಕೆ ಆಗುತ್ತಿದೆ. 20 ಸಾವಿರ ಮನೆಗಳಿಗೆ ಪಿಎನ್‌ಜಿ ಪೂರೈಕೆಗೆ ಸಂಸ್ಥೆ ಸನ್ನದ್ಧವಾಗಿದೆ.

ಮೊದಲ ಹಂತದಲ್ಲಿ ಎಚ್‌ಎಸ್‌ಆರ್ ಬಡಾವಣೆ ಹಾಗೂ ಬಿಇಎಲ್ ಕಾಲೊನಿ ಯ 250 ಮನೆಗಳಿಗೆ ಈ ಅನಿಲ ಪೂರೈಕೆ ಆರಂಭವಾಗಿದೆ.

### 2. ಕಾರುಗಳಿಗೂ ಸಿಎನ್‌ಜಿ ಕಿಟ್

ವಾಹನಗಳಲ್ಲಿ ಪೆಟ್ರೋಲ್ ಬದಲು ಸಾಂದ್ರೀಕೃತ ನೈಸರ್ಗಿಕ ಅನಿಲ (ಸಿಎನ್‌ಜಿ) ಬಳಕೆ ಉತ್ತೇಜಿಸುವ ಸಲುವಾಗಿ ಕರ್ನಾಟಕ ರಾಜ್ಯ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮ (ಕೆಎಸ್‌ಐಐಡಿಸಿ) ಕಚೇರಿಯ ಎರಡು ಕಾರುಗಳಿಗೆ ಸಿಎನ್‌ಜಿ ಕಿಟ್ ಅಳವಡಿಸಿದೆ. ರಾಜ್ಯದಲ್ಲಿ ಸರ್ಕಾರಿ ಕಚೇರಿ ಬಳಕೆಯ ವಾಹನಕ್ಕೆ ಸಿಎನ್‌ಜಿ ಬಳಸುತ್ತಿರುವುದು ಇದೇ ಮೊದಲು.

‘ಲೊವ್ಯಾಟೊ’ ಸಂಸ್ಥೆಯು ನಾಲ್ಕು ಚಕ್ರದ ವಾಹನ, ತ್ರಿಚಕ್ರ ವಾಹನ ಹಾಗೂ ಸ್ಕೂಟರ್‌ಗಳಿಗೆ ಅಳವಡಿಸಬಹುದಾದ ಸಿಎನ್‌ಜಿ ಕಿಟ್‌ಗಳನ್ನು ರೂಪಿಸಿದೆ. ‘ನಮ್ಮ ಸಂಸ್ಥೆಯ ಎರಡು ಕಾರುಗಳಿಗೆ ಈ ಕಿಟ್ ಅಳವಡಿಸಿದ್ದೇವೆ. ಸಿಎನ್‌ಜಿ ಬಳಕೆ ಬೇಡವೆನಿಸಿದಾಗ ಪೆಟ್ರೋಲ್ ಬಳಸಿ ವಾಹನ ಚಲಾಯಿಸಬಹುದು’ ಎಂದು ನಿಗಮದ ಅಧ್ಯಕ್ಷ ಸಿ.ಎಂ. ಧನಂಜಯ



ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER
ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು
ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.
600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.
ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.
ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.
ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ
ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.
ಬೆಂಗಳೂರು ಮೈಸೂರು 9880444450